## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಒದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.


ಚಿತ್ರಗಳು: ಫಕ್ರುದ್ದೀನ್ ಎಚ್.

ಯಾರೇ ಇರ್ಲಿ, ಹೆಂಗೇ ಇರ್ಲಿ, ಅವ್ನೆಲ್ಲ ಒಟ್ ಮಾಡೂದು ಎಂಥ ಅಂಥ ಕೇಂಡ್ರೆ ಅದು ನಮ್ಮ ಕುಂದಾಪ್ರ ಭಾಷಿಯೇ ಅಲ್ದಾ. ಜಗತ್ತಿನ ಯಾವ್ ಬದಿಲ್ಲೇ ಇರ್ಲಿ, ಒಂಚೂರು ಕಿಮಿಗೆ ಕುಂದಾಪ್ರ ಕನ್ನಡ ಕೇಂತ್ ಅಂದ್ಕಂಣಿ. ಕಿಮಿ ಪೂರಾ ನೆಟ್ಗ್ ಆಯಿ, ಅವ–ಇವ ಅಂಥೆಲ್ಲ ಯೋಚ್ನೆ ಮಾಡುಕಿಂತ್ ಮುಂಚೆಯೇ ‘ಹೋಯ್ ಕುಂದಾಪ್ರದವ್ರ, ಯಾವ ಬದಿಯವ್ರ್’ ಅಂತ ಕೇಳ್ದೆ ಇದ್ರೆ ಮನಸ್ಸಿಗ್ ಸಮಾಧಾನ್ ಅಂಬುದಿತ್ತಾ?!

ಊರೆಂದ್ರೆ ಊರು ಅತ್ಲಾಗೆ ಬೈಂದೂರಿಂದ ಇತ್ಲಾಗೆ ಬ್ರಹ್ಮಾವರ್ದ್ವರ್ಗೂ ಯಾರಾರೂ ಏನಾರೂ ಮಾತಾಡೂದಿದ್ರೆ ಹಿಂಗೆ ಇದೇ ಕುಂದಗನ್ನಡದಲ್ಲೇ ಮಾತಾಡೂದು. ಈ ಮಾತಂಗಿಪ್ಪು ಲಯ ಇತ್ತಲ್ಲ. ಕೇಂತಾ ಇದ್ರೆ ಒಂಥರಾ ಅಮ್ಮನೋ, ಅಜ್ಜಿಯೋ ಸಣ್ಣದಿಪ್ಪತ್ತಿಗೆ ಹಾಡ್ತಿದ್ದ್ ಲಾಲಿಯೇ ಮೈತಳದಂಗ್ ಅನ್ಸತ್ತ್.

ಕೋಟೇಶ್ವರಕ್ಕೆ ಹೋರು ಅಷ್ಟೆ, ಗುಡ್ಡಿಯಂಗಡಿಗೆ ಹೋರು ಅಷ್ಟೆ, ಬನ್ನಾಡಿಲ್ ಕಂಡ್ರು ಅಷ್ಟೆ. ಅತ್ಲಾಗೆ ಕೊಲ್ಲೂರು ಬದಿಗೆ ಹೋಯಿ ಬಂದ್ರು ಅಷ್ಟೆ. ಭಾಷಿ, ವೇಗ್ದಂಗ್. ರಾಗ್ದಂಗ್ ಹೆಚ್ಚಕಮ್ಮಿ ಆಪುವೇ. ಆರೇ ಲಯ ಅದೇ ಇರುತ್. ವೈಶಾಖದಲ್ ಜೋರ್ ಬಿಸ್ಲ್, ಅಸೋಡಿಯಲ್ಲ್ ಗಾಳಿ–ಮಳಿ, ಕೊಡಿ ತಿಂಗಳ್ ಚಳಿ ಹೀಗೆ ನಮ್ಮಿ ಋತುಗಳಿದ್ ಅವತಾರ ಕಾಣ್ಕಂದ್ರೆ, ‘ಅಯ್ಯಬ್ಬೇ’ ಅಂಬೂ ಅನುಭವ ಆಯ್ಕಂದ್ರೆ ಈ ತಿಂಗಳಲ್ಲೇ ಕುಂದಾಪ್ರಕ್ಕ್ ಹೋಯಿ ಬರ್ಕ್. ಈಗ ಅಸೋಡಿ ತಿಂಗ್ಳಲಾ. ಆಕಾಶಕ್ಕೆ ಒಟ್ಟೆ ಆದಂಗೆ ಮಳಿ ಸೊರಿಯತ್. ಮನಿದ್ ಮಾಡ್ ಎಲ್ಲಾ ಎಷ್ಹೊತ್ತಿಗ್ ಕೌಂಚಿ ಬೀಳೋತ್ತೋ ಹಂಗೆ ಸುರಿಯೊ ಮಳಿ ಆಯ್ಲಿ, ಗಾಳಿ ಆಯ್ಲಿ ಕಾಣ್ಕಾರೆ ಊರ್ ಬದಿಗೇ ಹೋಯಿ ಬರ್ಕೆ.

ಪ್ರತಿ ವರ್ಷ ಅಸೋಡಿ ಮಳಿಯಿಂದ ಮನಿ ಕಣ್ಣಾ ಪೂರ ಪಾಚಿ ಕಟ್ಕಂಡಿರ್ತ್. ಅದ್ರ್ ಮೇಲೆ ತೆಂಗಿನ್ ಗರಿ ಹಾಕ್ರೆ ಮುಗೀತ್. ಕಡಿಗೆ ದಿವಾಳಿ ತಿಂಗ್ಳಲ್ಲ್, ದೀಪಾವಳಿಗಾರೂ ಆಯ್ತ್, ತೊಳಸಿ ಕಟ್ಟೆ ಪೂಜಿಗಾರೂ ಆಯ್ತ್ ಅಂದ್ವೇಳಿ, ಕಣ್ಣ ಪೂರ ಮಣ್ಣು ವರ್ದು, ಸಗ್ಣಿ ಸಾರಿಸಿ, ಚೊಕ್ಕ ಮಾಡೂದು. ಇಂಥದ್ದನ್ನೆಲ್ಲ ಈ ಊರಲ್ಲ್ ಬಿಟ್ರೆ ಬೇರೆ ಎಲ್ಲ ಕಾಂಬೂಕೆ ಸಿಕ್ಕತ್ ಹೇಳಿ.

ಈಗಳೀಗಳ್ ಕಣ್ಣ ಪೂರ, ಮಣ್ಣ್ ವರ್ದು, ಸಗ್ಣಿ ಸಾರಿಸಿ ಚೊಕ್ಕ ಮಾಡೋದೆಲ್ಲ ಹೋಯಿತೆ. ಈಗಳೆಂತ ಇದ್ರೂ, ಸಿಮೆಂಟಿದು ಬಣ್ಣದ ಬಣ್ಣದ ಬ್ಲಾಕ್ಸ್ ಹಾಕಿ ಬಿಡ್ತ್ರ. ಹೆಂಚಿನ್ ಮಾಡ್ ಎಲ್ಲಿತ್?. ಎಲ್ಲ ತಾರಸಿ ಮನಿ ಅಲ್ದಾ. ತಾರಸಿ ಮ್ಯಾಲ್ ಬೇಕಾಪು ತರ್ಕಾರಿ ಬೆಳಿತಿಪ್ಪುದ್ ಕಾಂಬೂಕ್ ಸಿಕತ್ತ್ ಬಿಟ್ರೆ, ಹೆಂಚಿನ್ ಮಾಡ್ ಸಿಕ್ಕುದಿಲ್ಲ. ಶೋ ಅಂದ್ಕಂಡ್ ಕೆಂಪು ಹೆಂಚ್ ಹಾಕುದ್ ಕಾಣಲಕ್ಕ್ ಅಷ್ಟೆ.

ಅಷ್ಟೆ ಅಲ್ಲ ಕೆಲವು ಮನಿಯಲ್ ತಾರಸಿ ಮೇಲ್ ಮಲ್ಲಿಗಿ ಬಳ್ಳಿ ಬೆಳಸ್ತ್ರ. ಸೋಣೆ ಆರತಿಗೂ, ನವರಾತ್ರಿಗೂ ಬೇಕಿಪ್ಪು ಮಲ್ಲಿಗಿ ಅಲ್ಲೇ ಸಿಕ್ಕತಲ್ಲ. ಹಬ್ಬ ಬಂದ್ರೆ ‘ಮಂಗಳೂರು ಮಲ್ಲಿಗಿ’, ’ಶಂಕರಪುರ ಮಲ್ಲಿಗಿ’. ಅದಿಲ್ಲದೇ ಹಬ್ಬ ಆಪುದಿತ್ತಾ?. ಆಗಳಿಕೆಲ್ಲ ದೇವ್ರ್ ತಲಿಯಂಗೂ, ಕುಂದಾಪ್ರ ಹೆಣ್ಮಕ್ಕಳ್ ತಲಿಯಂಗೂ ಮಲ್ಲಿಗಿ ಇರ್ಕೆ. ಹಬ್ಬದ ಸುರಿಗೆಲ್ಲ ಶಂಕರಪುರ ಮಲ್ಲಿಗಿ ಬರಿ ಪಿರಿಯಾ. ಹಂಗಾಯಿ ತಾರಸಿ ಮ್ಯಾಲೆ ಹೂಕುಂಡ ಇಟ್ ಮಲ್ಲಿಗಿ ಬೆಳ್ದ್ರ ನಾಕು ಕಾಸೂ ಆಯ್ತ್, ಹೊರಗಿಂದ ಮಲ್ಲಿಗಿ ತಪ್ಪುದು ತಪ್ತ್. ಹಂಗೆಲ್ಲ ಯೋಚ್ನೆ ಮಾಡ್ತ್ರ ಕಾಣಿ ನಮ್ಮ ಕುಂದಾಪ್ರದ್ ಹೆಣ್ಮಕ್ಕಳು.

ಇನ್ನು ಈ ಸಣ್ಣಕ್ ಮಳಿ ಸುರು ಆಪತ್ತಿಗೆ, ಹಂಗ್ ಕತ್ಲ್ ಆತ್ತಂಬತ್ತಿಗೆ ಚಿಕ್ಕ ಮೇಳ್ದವರು ಮನಿಗೆ ಬತ್ರಲ್ಲ. ಮಾರುತಿ ಓಮ್ನಿಯೊ, ಆಟೊದಲ್ಲೊ ಹತಾರ ಇಟ್ಕೊಂಡು, ಭಾಗವತರು ಜತಿ ಒಂದು ಪುರುಷ ಹಾಗೂ ಸ್ತ್ರೀವೇಷ ಹಾಕ್ಪೊರು ಇರ್ತ್ರ್. ಜತಿಗೆ ಮದ್ದಳೆಯವರು. ಜಡಿ ಮಳಿ ಇರ್ಲಿ, ಗಾಳಿಯೇ


ಮಳೆಗಾಲದಲ್ಲಿ ಮನೆಯಲ್ಲಿ ನಡೆವ ಚಿಕ್ಕಾಟ ಮೇಳ